ಪದಬಂಧ




ಎಡದಿಂದ ಬಲಕ್ಕೆ :

1. ಆ ಪದ್ಯವನ್ನು ಕಲಿಸಲು ಸೂಕ್ತ ಶಿಕ್ಷಕ ಬೇಕು (4)
3. ಇರುವ ಸ್ಥಿತಿಗೆ ತಕ್ಕಂತಹ ವಾಸಸ್ಥಳ (3)
7. ಮತ್ತೇನು ಗತಿ? ಆ ಮಠದಲ್ಲಿದ್ದಾಳೆ ಮಂತ್ರ – ತಂತ್ರ ಬಲ್ಲ ಮಾಯಾವಿನಿ (4)
8. ಪರಿತಪಿಸುವಂತೆಯೇ ಇಲ್ಲ, ಅಂಥ ಪರಾಕ್ರಮ (3)
9. ಮೊದಲಿನಿಂದಲೂ ಹಾಗೇ, ಆಕೆಗೆ ಭಾರೀ ಸೊಕ್ಕು, ಗರ್ವ (2)
12. ಯಾರಿಗೂ ತಿಳಿದಿಲ್ಲ – ಆತನೊಬ್ಬ ಋಷಿ (2)
14. ಶಿಖಾರಿ ನಡೆಸಲು ಹೋದವರಿಗೆ ಕಂಡ ಪರ್ವತಾಗ್ರವೇ ಹಿಂದು ಮುಂದು (3)
15. ಮತ್ತೆ ಪ್ರತ್ಯಕ್ಷವಾಯಿತು ನೋಡಿ ' ಸ್ನೇಹಿತರ ಸಂಘಟನೆ '(4)
17. ಸುಪ್ರಸಿದ್ಧ ವಿಷ್ಣು ಮಿತ್ರನಾದರೂ ಕಲಹ ಹಬ್ಬಿಸುವ ಕುಪ್ರಸಿದ್ಧ (3)
18. ಅಂತಹ ಎಲ್ಲ ಶಂಕಿತರ ಬಗೆಗೆ ಸಂಖ್ಯೆಗಳಲ್ಲಿ ಮಾಹಿತಿ (4)

ಮೇಲಿಂದ ಕೆಳಕ್ಕೆ :

1. ಅತಿಕ್ರಮಣದ ಕೆಲಸ ಮಿತಿಮೀರಿದ್ದಾಯಿತು (2)
2. ಪಲ್ಲಕ್ಕಿಯನ್ನಿಟ್ಟ ಸ್ಥಳವೇ ಬೇರೆಡೆಗೆ ಬದಲಾಗುವುದೇ (3)
4. ಸುಪ್ರಭಾತ ಹಾಡಿದವನೇ ಆ ಗೋಷ್ಠಿಯ ಮುಖ್ಯಸ್ಥ (4)
5. ಮಂಕು ತಿಮ್ಮನ ತೀರ್ಮಾನವೇ ಅಲ್ಲಿ ಕೊನೆಯದು (3)
6. ಎಲ್ಲವನ್ನೂ ಸಂದಾಯ ಮಾಡುವುದು ಅಲ್ಲಿನ ಪಾರಂಪರಿಕ ಕ್ರಮ (4)
10. ದೂಷಣೆಗೆ ತಕ್ಕ ಶೂರ – ಹತ್ತು ತಲೆಯವ (4)
11. ಸರ ಕದಿವವರನ್ನೆಲ್ಲ ಶಿಕ್ಷಿಸಬೇಕು ರಾಜ್ಯದ ಆಡಳಿತ (4)
13. ಮಿತಿ ಮೀರುವಂತಾಗಿದೆ ಅವನ ಸೊಕ್ಕು (3)
16. ಪುಟ್ಟ ಹಕ್ಕಿಯ ಆಕಾರದ್ದು, ಹಬ್ಬದಲ್ಲಿ ಸಿಡಿಯುವಂಥದ್ದು (3)
17. ಆಶೆಯನ್ನೆಲ್ಲ ತೀರಿಸಿಕೊಳ್ಳ ಹೋದರೆ ಎಲ್ಲವೂ ಹಾಳು (2)

### 12-11-15ರ ಉತ್ತರಗಳು

ಎಡದಿಂದ ಬಲಕ್ಕೆ:

1. ನಿರಾತಂಕ 3. ನಿಸ್ಸಾರ 4. ದರ್ಶನ 6. ಭ್ರಮಾಧೀನ 7. ತಾರಕ 9. ಕೊನರು 11. ಮುನಿಸು 13. ಕವನ 15. ಕಾಡುಪಾಪ 17. ಲಡಾಯಿ 18. ದಶಕ 19. ಸುಧಾಕರ

ಮೇಲಿಂದ ಕೆಳಕ್ಕೆ:

1. ನಿರಭ್ರ 2. ಕದನ 3. ನಿರ್ಧಾರ 5. ನವೀನ 7. ತಾಲೀಮು 8. ಕಡಸು 9. ಕೊಳಕ 10. ರುಜಿನ 12. ನಿರ್ಮಲ 14. ವರ್ತಕ 15. ಕಾಯಿಸು 16. ಪದರ

## ಪ್ರಶ್ನಾಂಕಣ

# ಗಿಬ್ಬನ್ ಏನು ವಿಶೇಷ ?

ಸ್ತನಿ ವರ್ಗದ ಒಂದು ಉಪವರ್ಗವಾದ 'ಪ್ರೈಮೇಟ್' ಗಳಲ್ಲಿ ಪಂಚ ವಿಧ ವಾನರರೂ ಸೇರಿವೆ: ಗೊರಿಲ್ಲ, ಚಿಂಪಾಂಜಿ, ಬೋನೊಬೋ, ಒರಾಂಗೊಟಾನ್ ಮತ್ತು ಗಿಬ್ಬನ್. ವಾನರರ ಈ ಸಮೂಹದಲ್ಲಿ ಅತ್ಯಂತ ಚಿಕ್ಕ ಗಾತ್ರದ ವಾನರ ಆಗಿರುವುದೇ ಗಿಬ್ಬನ್ ನ ಮೊದಲ ವಿಶೇಷ . ಗೊರಿಲ್ಲ, ಚಿಂಪಾಂಜಿ ಮತ್ತು ಬೋನೊಬೋಗಳು ಆಫ್ರಿಕಾದ ವೃಷ್ಟಿ ವನಗಳಿಗೆ ಸೀಮಿತವಾಗಿದ್ದರೆ ಒರಾಂಗೊಟಾನ್ ನಂತೆ ಏಷಿಯ ಖಂಡದಲ್ಲಿ ಮಾತ್ರ ನೆಲೆಗೊಂಡಿರುವುದು ಗಿಬ್ಬನ್ ನ ದ್ವಿತೀಯ ವಿಶೇಷ .

ಎತ್ತರದಲ್ಲೂ, ಗಾತ್ರದಲ್ಲೂ ಮಂಗಗಳನ್ನೇ ಹೆಚ್ಚಾಗಿ ಹೋಲುವ ಗಿಬ್ಬನ್ (ಚಿತ್ರ ನೋಡಿ) ವಾಸ್ತವವಾಗಿ ಏಷಿಯದಲ್ಲಿ ಬಹಳ ವಿಸ್ತಾರ ಹರವನ್ನು ಹೊಂದಿದೆ. ಈಶಾನ್ಯ ಭಾರತ, ಬಾಂಗ್ಲಾ ದೇಶ, ದಕ್ಷಿಣ ಚೀನಾ, ಇಂಡೋನೇಷಿಯ, ಜಾವಾ, ಸುಮಾತ್ರಾ ಮತ್ತು ಬೋರ್ನಿಯೋಗಳ ಮಳೆ ಕಾಡು ಪ್ರದೇಶಗಳಲ್ಲಿ ಚದರಿ ನೆಲೆಸಿರುವ ಗಿಬ್ಬನ್ ಗಳಲ್ಲಿ ಪ್ರಸ್ತುತ ಒಟ್ಟು ಹದಿನೈದು ಪ್ರಭೇದಗಳಿವೆ. ಹೀಗೆ ಅತ್ಯಧಿಕ ಪ್ರಭೇದಗಳನ್ನು ಹೊಂದಿರುವ ವಾನರ ವಿಧ ಆಗಿರುವುದು ಗಿಬ್ಬನ್ ಗಳ ಇನ್ನೊಂದು ವಿಶೇಷ .

ಇನ್ನೂ ವಿಶೇಷ ಏನೆಂದರೆ ಗಿಬ್ಬನ್ ಗಳು ಸಂಪೂರ್ಣ ವೃಕ್ಷ ವಾಸಕ್ಕೆಂದೇ , ನೆಲಕ್ಕೇ ಇಳಿಯದೆ ಅಡವಿಯ ವೃಕ್ಷಗಳ ಕೊಂಬೆ ರೆಂಬೆಗಳಲ್ಲೇ ನೆಲೆಸಲೆಂದೇ ಸೃಷ್ಟಿಗೊಂಡಿವೆ ; ಅಂತಹ ಜೀವನ ಕ್ರಮಕ್ಕೆ ಸಂಪೂರ್ಣ ಒಪ್ಪವಾಗುವ ಶರೀರ ವಿನ್ಯಾಸವನ್ನು ಪಡೆದಿವೆ. ಕೊಂಬೆ ರೆಂಬೆಗಳಲ್ಲಿ ತೋಳುಗಳ ಮೇಲೇ ತೂಗಾಡುತ್ತ ತಾಸಿಗೆ ಐವತ್ತು ಕಿಲೋಮೀಟರ್ ಗೂ ಅಧಿಕ ವೇಗದಲ್ಲಿ



ಓಡಾಡುವ ಸಾಮರ್ಥ್ಯ ಈ ವಾನರರಿಗಿದೆ (ಚಿತ್ರ ನೋಡಿ ). ಭಾರೀ ಉದ್ದದ ತೋಳುಗಳಿಂದಾಗಿ ಅತ್ಯಂತ ಅಪರೂಪವಾಗಿ ನೆಲಕ್ಕಿಳಿದಾಗಲೂ ತಮ್ಮ ಎರಡೂ ತೋಳುಗಳನ್ನು ಭುಜದ ಮೇಲೆ ಎತ್ತಿ ಹಿಡಿದು ನಡೆದಾಡುವುದು ಅವುಗಳಿಗೆ ಅನಿವಾರ್ಯ .

ಸಾಂಘಿಕವಾಗಿ ಎಂದರೆ ಗುಂಪು ಗುಂಪಾಗಿ ಜೀವಿಸುವ ಗಿಬ್ಬನ್ ಗಳು ಪ್ರಧಾನವಾಗಿ ಫಲಾಹಾರಿಗಳು. ಹಾಗೆ ವಿಧ ವಿಧ ಹಣ್ಣುಗಳ ಜೊತೆಗೆ ಚಿಗುರೆಲೆಗಳು, ಎಳೆಯ ರೆಂಬೆಗಳು, ಹೂವುಗಳು, ಕೀಟಗಳು ಮತ್ತು ಹಕ್ಕಿ ಮೊಟ್ಟೆಗಳನ್ನೂ ಅವು ಸೇವಿಸುತ್ತವೆ. ಪ್ರತಿ ಗುಂಪಿನ ಗಿಬ್ಬನ್ ಗಳೂ ತಮ್ಮ ಸರಹದ್ದನ್ನು ಕಾಯ್ದುಕೊಳ್ಳಲು ತೆಗೆವ ಧ್ವನಿ ಅಡವಿಯಲ್ಲಿ ಒಂದು ಕಿಲೋ ಮೀಟರ್ ನಷ್ಟು ದೂರಕ್ಕೆ ಸ್ಪಷ್ಟವಾಗಿ ಕೇಳಿಸುತ್ತದೆ. ಪ್ರತಿ ರಾತ್ರಿಯೂ ಇತರ ಎಲ್ಲ ವಿಧಗಳ ವಾನರರಂತೆ ಮಲಗಲು ಎಲೆಗಳ ಹಾಸಿಗೆಯನ್ನು ನಿರ್ಮಿಸದೆ ಇರುವುದು ಗಿಬ್ಬನ್ ಗಳ ವಿಭಿನ್ನತೆ.

ವಿಪರ್ಯಾಸ ಏನೆಂದರೆ ಗಿಬ್ಬನ್ ಗಳ ಸರ್ವ ಪ್ರಭೇಧ ಗಳೂ ಅಲ್ಪ ಸಂಖ್ಯಾತವಾಗಿವೆ. ಆವಾಸ ನಾಶ ಎಂದರೆ ದಿನೇ ದಿನೇ ಕುಗ್ಗುತ್ತಿರುವ ವೃಷ್ಟಿವನ ಪ್ರದೇಶ ಈ ವಾನರರ ಈ ದುಸ್ಥಿತಿಗೆ ಮುಖ್ಯ ಕಾರಣ. ಜೊತೆಗೆ ಸಾಕು ಪ್ರಾಣಿ ದಂಧೆಗೂ, ಮೌಢ್ಯದ ಔಷಧಗಳ ತಯಾರಿಕೆಗೂ, ವನ್ಯ ಮಾಂಸ ಸೇವನೆಯ ವಿಕೃತ ಜಿಹ್ವಾ ಚಾಪಲ್ಯಕ್ಕೂ ಕೂಡ ಅವು ಬಲಿಯಾಗುತ್ತಿವೆ. ಹಾಗಾಗಿ ಇತರ ಎಲ್ಲ ವಾನರರಂತೆಯೇ ಗಿಬ್ಬನ್ ಗಳೂ ಅಳಿವ ಹಾದಿ ಹಿಡಿದಿವೆ.

■ ಎನ್. ವಾಸುದೇವ್